ಮಹಮ್ಮದ್ ಮುಮ್ತಾಜ್‌ಸಾಹೆಬರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಾಯ್ ಈ ಕೋರ್ಟಿಗೆ ಖಾಯಿಷ್‌ಪಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೊಹರ್ದೀಸಾಬರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುತವಲಿ ಹಕೀಂ ಮುಹಮ್ಮದ್ ಮುಮ್ತಾಜ್ ಸಾಹೆಬರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಇದೆ.

1887ನೇ ಇಸವಿ ಆಗಸ್ಟು ತಿಂಗಳು8ನೇ ತಾರೀಖಿನಲ್ಲಿ ಕೋರ್ಟು ವೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್ ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾವ ಡಿಕ್ರೀ ದೇಣೇದಾರ ಮೈಸೂರು ಶ್ರೀರಾಂಪೇಟೇಲಿರುವ ಸವಾರ್ ಇಲಾಖಾ 1ನೇ ರಿಜಿಮಿಟ್ 6ನೇ ಸಿಪಾಯಿ ವೇಷ್ಕರ್ ವಿಠಲರಾಯನ ವಿಷಯದಲ್ಲಿ—

ಸ್ ಈ 1887ನೇ ಇಸವಿ ದಿವಾಳೀ ಕೇಸ್ ನಂಬರು 154.

ಹುಕ್ಕುಂ.

ಮೇಲ್ಕಂಡ ವಿಠಲರಾಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವನ್ನು, ಈ ಕೋರ್ಟು ರೂಬರೂ ಅರ್ಜೀದಾರನಾದ ವಿಠಲರಾಯನ ಪರವಾಗಿ ಫಸ್ಟ್‌ಗ್ರೇಡ್ ಪ್ಲೀಡರ್ ಮೆ॥ ವೆಂಕೋಬರಾಯರನ್ನು ಮತ್ತು ಸದರೀಯವನ ಲೇಣೇದಾರ್‌ರಾದ 6ನೇ ಕೃಷ್ಣಮೂರ್ತಿರಾವ್ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ, 1ನೇ ವಡಿಸ್ವಾಮಿ ರಾಯಾಚಾರಿ 2ನೇ ರಂಗಪ್ಪ 3ನೇ ಶೇಷಗಿರಿರಾವ್, 4ನೇ ಮಾರವಾಡೀ ದೇವಾಜಿ ಜೋಲಾಜಿ 5ನೇ ರಾಜಪ್ಪ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ವೇಷ್ಕರ್ ವಿಠಲರಾಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ನತ್ತಾಗಿರುವ ಪಟ್ಟಿಯಲ್ಲಿಕಂಡ ಯಾವ ಸಾಲಕ್ಕೂ ಸ್ವತಂತ್ರವಾಗಿಯಾಗಲಿ ದಸ್ತಗೀರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸೆ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ ಈ 1887ನೇ ಇಸವಿ ಜುಲೈ 27ನೇ ತಾರೀಖಿನಲ್ಲಿ ಈ ಕೋರ್ಟು ವೊಹರ್ ನಮ್ಮ ದಸ್ತಖತ್‌ನೀಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು	ಲೇಣೇದಾರ್‌ರು ಅಥವಾ ದಾವಾದಾರ್‌ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜೊಬುಲಗ	ದೇಣೇ ಮುದಲ್ಲಿ ಗೊಂಡಾಗ ಮುದಲ್ಲಿ	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೋನಾದರೂ ಇವ್ಯರೆ.	ಷರಾ.
1	ವಮೊಗ್ಗಾದಲ್ಲಿರುವ ವಡಿಸ್ವಾಮಿರಾಯಾಚಾರಿ	89 3 4		ಡಿಕ್ರೀ ಬಾಬತು	

ದಿವಾಳಿಯಾದ ಡಿಕ್ರೀ ದೇಣೇದಾರಳು ಶ್ರೀರಂಗಪಟ್ಟಣ ತಾಲ್ಲೂಕು ಕ್ಯಾತನಹಳ್ಳೀ ಹೋಬಳಿ ಕಡತನಾಳು ಗ್ರಾಮದಲ್ಲಿರುವ

ಅಕ್ಕಮ್ಮನ ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ನಂಬರ್ 57.

ಹುಕ್ಕುಂ.

ಮೇಲ್ಕಂಡ ಅಕ್ಕಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟ್ಗೆ ರುಜುವು ಅರ್ಜಿದಾರಳಾದ ಅಕ್ಕಮ್ಮನ ಪರವಾಗಿ ಅಡ್ವೋಕೇಟ್ ಮೆ॥ ನಾರಣಯ್ಯಂಗಾರ್ರನ್ನೂ ಮತ್ತು ಸದರೀಯವಳ ದೇಣೇದಾರಾದ 1ನೇ ಲಿಂಗೇಗೌಡ 2ನೇ ಚನ್ನಲಿಂಗೇಗೌಡನ ಲಿಂಗೇಗೌಡ, 3ನೇ ಪುರಿಪುಟ್ಟೇಗೌಡ ಮುದ್ದು ಹಾಜರು 7ನೇ ಕೊಮಾರಯ್ಯನಕಡೆ ಅಡ್ವೋಕೇಟ್ ಮೆ॥ ಡಿ, ಸಾಹೆಬರು ಯಿವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ದೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ, ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ, 4ನೇ ಲಿಂಗ 5ನೇ ನಂಜೆ 6ನೇ ಜವರೇಗೌಡನ ಲಿಂಗೇಗೌಡ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಅಕ್ಕಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇವಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಗಿಕ್ಕೆ ಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟುನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಕಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1887ನೇ ಇಸವಿ ಜುಲೈ 27ನೇ ತಾರೀಖಿನಲ್ಲಿ ಕೋರ್ಟು ಪೊಹರ್ ನಮ್ಮ ದಸ್ತಖತ್ತಿನೀಲೆ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ದೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಬಲಗು.			ಯಾವಾಗ ದೇಣೆ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇ ನಾದರೂ ಇದ್ದರೆ.	ಷರಾ.
1	ಶ್ರೀರಂಗಪಟ್ಟಣ ತಾಲ್ಲೂಕು ಕಡತನಾಳಲ್ಲಿರುವ ಲಿಂಗೇಗವ್ವಡ.	180	0	0	..	ಆಧಾರ ತನುಸೂಕು ಬಾಬತು	
2	ಡಿಟೋ ವೂರು ಚನ್ನಲಿಂಗೇಗವ್ವಡನ ಲಿಂಗೇಗವ್ವಡ	25	0	0	..	ನಗದು ಲೇವಾದೇವೀ ತನುಸೂಕು ಬಾಬತು	
7	ಶ್ರೀರಂಗಪಟ್ಟಣದಲ್ಲಿರುವ ಕೊಮಾರಯ್ಯ ಪ್ಲೀಡರ್	32	0	0	..	ಡಿಕರೀ ಬಾಬತು	
		237	0	0			

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ನಂ. 9. ತಾರೀಖು 12ನೇ ಆಗಸ್ಟ್ 1887.

ಯಜತೊರೇ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನ ಕ್ರಮವಾದ ವಾರಸುದಾರ್ರಾಗಲಿ ಅಥವಾ ಅಧಿಕಾರ ಕೊಂಡಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯ್ತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸು ಪಡಿಯಬೇಕು ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 35ನೇ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ:—